


# ಚೆರ್ರಿ ಮರ

■ ಮೂಲ: ರಸ್ಕಿನ್ ಬಾಂಡ್
■ ಕನ್ನಡಕ್ಕೆ: ಎಂ.ಎಸ್. ರಘುನಾಥ್

ರಾಕೇಶ ಆರು ವರ್ಷದವನಿದ್ದಾಗ ಒಂದು ದಿನ, ಮಸೂರಿ ಬಜಾರಿನಿಂದ ಮನೆಗೆ ನಡೆದು ಬಂದ ಚೆರ್ರಿ ಹಣ್ಣನ್ನು ತಿಂದ. ಅದು ರುಚಿಯಲ್ಲಿ ಸ್ವಲ್ಪ ಸಿಹಿ, ಸ್ವಲ್ಪ ಒಗರು ಸಣ್ಣಗೆ ಹೊಳೆಯುವ ಕೆಂಪು ಬಣ್ಣದ ಚೆರ್ರಿಗಳಾಗಿದ್ದವು, ಎಲ್ಲಾ ಕಾಶ್ಮೀರ ಕಣಿವೆಯಿಂದ ತರಲ್ಪಟ್ಟಿದ್ದವು.

ರಾಕೇಶ ವಾಸಿಸುತ್ತಿದ್ದ ಹಿಮಾಲಯಾದ ತಪ್ಪಲಲ್ಲಿ ಹಣ್ಣಿನ ಮರಗಳು ಹೆಚ್ಚಿರಲಿಲ್ಲ. ನುರುಜು ತುಂಬಿದ ಮಣ್ಣು, ಒಣ ತಣ್ಣಗಿನ ಗಾಳಿ ಅನೇಕ ಗಿಡಗಳ ಬೆಳವಣಿಗೆಯನ್ನು ಕುಂಠಿತಗೊಳಿಸಿದ್ದವು. ಆದರೆ ಮೆಟ್ಟಿಲುಗಳಿಲ್ಲದ ಇಳಿಜಾರಲ್ಲಿ ಓಕ್ ಮತ್ತು ದೇವಧಾರು ಮರಗಳಿದ್ದವು.

ಕಾಡು ಬೆಳೆದಿದ್ದ ಮಸೂರಿಯ ಹೊರಭಾಗದಲ್ಲಿ ರಾಕೇಶ ತನ್ನ ತಾತನೊಂದಿಗೆ ವಾಸಿಸುತ್ತಿದ್ದ. ಮೆಕ್ಕೆ ಜೋಳ, ಭತ್ತ ಹಾಗೂ ಬಾರ್ಲಿಯನ್ನು ಪರ್ವತದ ಕೆಳಗಿನ ಇಳಿಜಾರಿನಲ್ಲಿ ಕಿರಿದಾದ ಜಮೀನಿನಲ್ಲಿ ಬೆಳೆದಿದ್ದು, ಐವತ್ತು ಮೈಲಿ ದೂರದ ಪ್ರದೇಶದಲ್ಲಿ ಸಣ್ಣ ಹಳ್ಳಿಯೊಂದರಲ್ಲಿ ಈತನ ತಂದೆ ತಾಯಿ ವಾಸಿಸುತ್ತಿದ್ದರು. ಆದರೆ ಆ ಹಳ್ಳಿಯಲ್ಲಿ ಶಾಲೆಗಳಿರಲಿಲ್ಲ, ಅವನು ಶಾಲೆಗೆ ಹೋಗಬೇಕೆಂಬುದು ರಾಕೇಶನ ತಂದೆ ತಾಯಿಯರ ಒತ್ತಾಸೆಯಾಗಿತ್ತು. ಅವನು ಶಾಲೆಗೆ ಹೋಗುವ ವಯಸ್ಸಿನವನಾದ ತಕ್ಷಣ ಅವರು